ಪರಿಷತ್‌ನಲ್ಲಿ ಹೊಸದಿಗಂತ ವರದಿ ಉಲ್ಲೇಖ

ಆತ್ಮಹತ್ಯೆ ತಡೆಯಲು ಅಧ್ಯಯನ ನಡೆಸಿ


15 ತಿಂಗಳಲ್ಲಿ 30 ರೈತರ ಆತ್ಮಹತ್ಯೆ!
ಕೈಕೊಟ್ಟ ಮಳೆ, ಬೆಳೆ ಹಾನಿಯಿಂದ ಕಂಗೆಟ್ಟು ಅನ್ನದಾತ ಆತ್ಮಹತ್ಯೆ
• ಮಂಜುನಾಥ ಗಂಗಾವತಿ
ಕೊಪ್ಪಳ: ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣ ಹೆಚ್ಚಾಗುತ್ತಿದ್ದು, 15 ತಿಂಗಳಲ್ಲಿ 30 ರೈತರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ! ಬರ, ಬೆಳೆ ಹಾನಿ, ಕೈಗೆ ಸಿಗದ ಫಸಲು, ಸಾಲಬಾಧೆ ತಾಳಲಾರದೇ ಅನ್ನದಾತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. 2023 ಏಪ್ರಿಲ್ 1 ರಿಂದ 2024
ದಿಗಂತ ವಿಶೇಷ
■ ಒಂದೂಕಾಲು ವರ್ಷದಲ್ಲಿ 30 ರೈತರ ಆತ್ಮಹತ್ಯೆ
"ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ರೈತರಿಗೆ ಪ್ರಾಯೋಜನ ಸಿಗುತ್ತಿಲ್ಲ. ರೈತರಿಗೆ ಪರಿಹಾರ ಕೊಡುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ರೈತರ ಆತ್ಮಹತ್ಯೆ ತಡೆಯುವಲ್ಲಿ ಸರ್ಕಾರ ಕೈಮಕ್ಕಗೊಳ್ಳಬೇಕು.
■ ಸಮೀರ್ ಗುಳಗಣ್ಣನವರ್, ಬಿಜೆಪಿ ಜಿಲ್ಲಾಧ್ಯಕ್ಷ

ವಿಧಾನ ಪರಿಷತ್: ರೈತರ ಆತ್ಮಹತ್ಯೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ಸಮರ್ಪಕ ಅಧ್ಯಯನ ನಡೆಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬಿಜೆಪಿಯ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಒತ್ತಾಯಿಸಿದ್ದಾರೆ.

ಹೊಸದಿಗಂತ ಪತ್ರಿಕೆಯಲ್ಲಿ ಜು. 16ರಂದು ಪ್ರಕಟವಾದ 15 ತಿಂಗಳಲ್ಲಿ 30 ರೈತರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ! ಎಂಬ ಶೀರ್ಷಿಕೆಯಡಿ ಪ್ರಕಟವಾದ ವರದಿಯನ್ನು ಉಲ್ಲೇಖಿಸಿ ವಿಧಾನ ಪರಿಷತ್ ನ ಶೂನ್ಯ ವೇಳೆಯಲ್ಲಿ ಪ್ರಶ್ನೆ ಹಾಕಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣ ಹೆಚ್ಚಾಗುತ್ತಿದ್ದು, ಬರ, ಬೆಳೆ ಹಾನಿ, ಕೈಗೆ ಸಿಗದ ಫಸಲು, ಸಾಲ ಭಾದೆ ತಾಳಲಾರದೆ ಅನ್ನದಾತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. 2023 ಏಪ್ರಿಲ್ 1 ರಿಂದ 2024 ಜೂನ್ 4ರವರೆಗೆ ಜಿಲ್ಲೆಯಲ್ಲಿ 30 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಲ್ಲಿ 27 ಮಂದಿಗೆ ಪರಿಹಾರ ಧನ ವಿತರಿಸಲಾಗಿದ್ದು, ಮೂವರ ಅರ್ಜಿ ತಿರಸ್ಕೃತ ಮಾಡಲಾಗಿದೆ ಎಂದು ಅಂಕಿ ಅಂಶ ಸರ್ಕಾರ ಧೃಡ ಪಡಿಸಿದೆ ಎಂದಿದ್ದಾರೆ.

ಕೈಕೊಟ್ಟ ಮಳೆ, ಬೆಳೆ ಹಾನಿಯ ಪರಿಣಾಮ ಬ್ಯಾಂಕ್ ಸಾಲ ಮರುಪಾವತಿಸಲಾಗಿದೆ ಬಹುತೇಕ ರೈತರು ನೇಣಿಗೆ ಕೊರಳೊಡ್ಡಿದ್ದಾರೆ.

ಆತ್ಮಹತ್ಯೆ ಪ್ರಕರಣಗಳು ಹೆಚ್ಚಲು ಇದೂ ಕಾರಣ ಇರುವ ಸಾದ್ಯತೆ ಹೆಚ್ಚಿದೆ. ಜಿಲ್ಲೆಯಲ್ಲಿ ಗಂಗಾವತಿ, ಕಾರಟಗಿ ನೀರಾವರಿ ಪ್ರದೇಶವಾದರು. ಕಳೆದ ಬೇಸಿಗೆಯಲ್ಲಿ ಪ್ರಕೃತಿ ವಿಕೋಪದಿಂದಾಗಿ ಬೆಳೆ ನಾಶ ಉಂಟಾಯಿತು. ಇದರಿಂದ ರೈತರು ನಷ್ಟ ಎದುರಿಸಬೇಕಾಯಿತು ಇನ್ನು ಕುಕನೂರು, ಯಲಬುರ್ಗಾ, ಕೊಪ್ಪಳ ಹಾಗೂ ಕುಷ್ಟಗಿ ಭಾಗದಲ್ಲಿ ಬೇಸಿಗೆ ನಾಟಿ ಬಳಿಕ ಮಳೆಯೇ ಆಗಲಿಲ್ಲ, ಇದರಿಂದ ರೈತರು ಸಾಲದ ಸುಳಿಯಲ್ಲಿ ಸಿಲುಕಿದರು. ಇದು ಕೂಡ ಆತ್ಮಹತ್ಯೆಗೆ ಕಾರಣವಾಗಿದೆ ಎಂದು ವಿಷಯ ಪ್ರಸ್ತಾಪಿಸಿದರು.ಇದಕ್ಕೆ ಸಭಾನಾಯಕ ಎನ್.ಎಸ್. ಭೋಸರಾಜು ಅವರು ಸಂಬಂಧ ಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದ್ದಾರೆ.

ಅಂಕೋಲಾ ದುರಂತ ಪ್ರಸ್ತಾಪಿಸಿದ ಶಾಂತಾರಾಮ ಸಿದ್ದಿ

ಪ.ಘಟ್ಟದಲ್ಲಿ ಗುಡ್ಡ ಕುಸಿತ | ಎಚ್ಚೆತ್ತುಕೊಳ್ಳಲಿ ಸರ್ಕಾರ
ಭೂಕುಸಿತಕ್ಕೆ ಕೊನೆ ಇಲ್ಲವೇ?
• ವಿಠ್ಠಲದಾಸ ಕಾಮತ್
ಕಾರವಾರ: ಇಲ್ಲಿಯ ಅಂಕೋಲಾದ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಬೆಳಗ್ಗೆ ಸಂಭವಿಸಿದ ಭೀಕರ ಭೂಕುಸಿತವು ಮತ್ತೊಮ್ಮೆ ಪಶ್ಚಿಮ ಘಟ್ಟದ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ಅವೈಜ್ಞಾನಿಕ ದಾಳಿಯ ಪಿಡುದ್ದ ಎಚ್ಚರಿಕೆಯ ಗಂಟೆ ಮೊಳಗಿಸಿದೆ.
ದಿಗಂತ ವಿಶೇಷ
ಈ ದುರ್ಘಟನೆಯಲ್ಲಿ 15ಕ್ಕೂ ಅಧಿಕ ಜನ ತಮ್ಮ ಪ್ರಾಣ ಕಳೆದುಕೊಳ್ಳುವುದಾಗಿ ಪ್ರಾಥಮಿಕ ವರದಿ ಬರುತ್ತಿದ್ದು, ಏಪತ್ತು ನಿರ್ವಹಣಾ ಪಡೆಯ ಕಾರ್ಯಾಚರಣೆಯ ನಂತರದಲ್ಲಿ ನಿಖರ ಸಂಖ್ಯೆ ತಿಳಿದು ಬರಲಿದೆ. ರಾಜ್ಯ ಕರಾವಳಿ ಜಿಲ್ಲೆಗಳಲ್ಲಿ ಏಲೇಚಾವಾಗಿ ಉ.ಕ ಜಿಲ್ಲೆಯ ಗುಡ್ಡದ ಹಪ್ಪಲಿನಲ್ಲಿ ಧರೆ ಕುಸಿದು ಪ್ರತಿ ಮಳೆಗಾಲದಲ್ಲಿ ಘಟಿಸುತ್ತಿರುವ ದುರಂತಗಳ ಸಾಲಿಗೆ ಈಗ ಮತ್ತೊಂದು ದುರ್ಘಟನೆ ಸೇರ್ಪಡೆಯಾಗಿದೆ. ಪ್ರಸ್ತುತ ಮಳೆಗಾಲದಲ್ಲೇ ಶಿರಸಿ- ಕುಮಟಾ ರಸ್ತೆ, ಹೊನ್ನಾವರ- ಗೇರುಸೊಪ್ಪ ರಸ್ತೆ ಸೇರಿ ಸುಮಾರು 9 ಕಡೆ ಇಂತಹ ಧರೆ ಕುಸಿತ ದಾಖಲಾಗಿದೆ.
ಯಾಕೆ ಈ ಕುಸಿತ?: ಪಶ್ಚಿಮಘಟ್ಟ ಪ್ರದೇಶದಲ್ಲಿ, ವಿಶೇಷವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಪದೇ ಪದೇ ಇಂತಹ ಭೂಕುಸಿತ ದಾಖಲಾಗುತ್ತಿದೆ. 2009ರ ಆ.2ರಂದು ಕಾರವಾರದ ಕಡವಾಡ ಜರೀವಾಡಾದಲ್ಲಿ ಆಗಿದ್ದ ಗುಡ್ಡ ಕುಸಿತದಲ್ಲಿ 20 ಜನ ಮಣ್ಣಿನಡಿ ಪ್ರಾಣ ಕಳೆದ್ದರು.
ಧೂಳು ತಿನ್ನುತ್ತಿರುವ ಗ್ರೀನ್ ಬೆಲ್ಟ್ ಪ್ರಸ್ತಾವನೆ
ಅಂಕೋಲಾದಲ್ಲಿ ಆಗಿರುವ ಈ ಮರಣತದ ಬಗ್ಗೆ ಶಾಸಕ ಸತೀಶ್ ಸೈಲ್ ಸದನದಲ್ಲಿ ಪ್ರಸ್ತಾಪ ಮಾಡಿದ್ದು, ಚರ್ಚೆ ಆಗಿದೆ. ಆದರೆ 2019- 20 ರಂದು ರಾಜ್ಯ ಸರ್ಕಾರ ಇಂತಹ ಅವಘಡ ನಿಯಂತ್ರಣಕ್ಕೆ ಸೂಕ್ತ ಸಲಹೆ ನೀಡಲು ಪಶ್ಚಿಮ ಘಟ್ಟ ಕಾರ್ಯಪಡೆ, ಚೀನ ವೈವಿಧ್ಯತಾ ಮಂಡಳಿ, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರತಿನಿಧಿಗಳ ಸಮಿತಿಯೊಂದನ್ನು ರಚಿಸಿತ್ತು.

ಯಲ್ಲಾಪುರ: ಅಂಕೋಲಾ ಸಮೀಪದ ಶಿರೂರಿನಲ್ಲಿ ಗುಡ್ಡ ಕುಸಿತದಿಂದ ಆಗಿರುವ ಅವಘಡ ಮತ್ತು ಇದಕ್ಕೆ ಅವೈಜ್ಞಾನಿಕ ಹೆದ್ದಾರಿ ಅಗಲೀಕರಣ ಕಾಮಗಾರಿ ಕಾರಣ ಎಂಬ ವಿಷಯವನ್ನು ವಿಧಾನ 'ಪರಿಷತ್‌ನಲ್ಲಿ ಪ್ರಸ್ತಾಪಿಸಿದ ವಿ.ಪ ಸದಸ್ಯ ಶಾಂತಾರಾಮ ಸಿದ್ದಿ ಪ್ರಸ್ತಾಪಿಸಿ ಸರ್ಕಾರದಿಂದ ಪ್ರಸ್ತಾಪಿಸಿದರು.

ಗುರುವಾರ ಶೂನ್ಯ ವೇಳೆಯಲ್ಲಿ ಹೊಸದಿಗಂತದಲ್ಲಿ ಈ ದುರಂತದ ಕುರಿತಾಗಿ ಮತ್ತು ಪಶ್ಚಿಮ ಘಟ್ಟದ ರಕ್ಷಣೆ ಕುರಿತಾಗಿ ಮುಖಪುಟದಲ್ಲಿ ಬಂದಿರುವ ವರದಿ ಓದಿ ಹೇಳಿದ ಶಾಂತಾರಾಮ ಸಿದ್ದಿ, ಈ ದುರಂತಕ್ಕೆ ಹೆದ್ದಾರಿಯಲ್ಲಿ ನಡೆದ ಅವೈಜ್ಞಾನಿಕ ಅಗಲೀಕರಣ ಕಾಮಗಾರಿ ಕಾರಣ.

ಭೂಕುಸಿತ ತಡೆಯಲು ಪರಿಸರ ವಿಜ್ಞಾನಿಗಳು ಸರ್ಕಾರಕ್ಕೆ ನೀಡಿದ್ದ ವರದಿ ಏನಾಯ್ತು. ಹಸಿರು ಬೆಳೆಸಲು ರೂಪಿಸಲಾಗಿದ್ದ ಗ್ರೀನ್ ಬೆಲ್ಟ್ ಯೋಜನೆಯ ಪ್ರಸ್ತಾವನೆ ಏನಾಯ್ತು ಎಂದು ಸರ್ಕಾರದಿಂದ ಉತ್ತರ ಬಯಸಿದರು. ಸಭಾನಾಯಕರಾಗಿದ್ದ ಬಸವರಾಜ ಹೊರಟ್ಟಿ ಇದಕ್ಕೆ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು ಎಂದರು.

ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಲಿ

ವಿಧಾನ ಪರಿಷತ್: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಮೂಲಕ ಸರ್ಕಾರ ಹಗಲು ದರೋಡೆ ನಡೆಸಿರುವುದು ಸ್ಪಷ್ಟವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು ಎಂದು ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ್ ಒತ್ತಾಯಿಸಿದರು.

ನಿಯಮ 68ರಡಿ ವಿಷಯ ಪ್ರಸ್ತಾಪಿಸಿದ ಅವರು, ನೇರಸಾಲ, ಐರಾವತಿ, ಸಂವೃದ್ಧಿ ಎಂಬ ಯೋಜನೆಗಳಿವೆ. ಈ ಯೋಜನೆಗಳಿವೆ ಎಂಬುದು ಪರಿಶಿಷ್ಟ ಪಂಗಡ ಜನರಿಗೆ ಗೊತ್ತಿಲ್ಲ ಎಂಬುದೇ ದುಃಖದ ಸಂಗತಿ. ಕಳೆದ ಎಸ್‌ಟಿಪಿ, ಟಿಎಸ್‌ಪಿಯಲ್ಲಿ 11,144 ಕೋಟಿ ರೂ. ಪೋಲಾಗಿದೆ ಎಂದರು.

ಕೊಪ್ಪಳ ಜಿಲ್ಲೆಯಲ್ಲಿ ವಾಲ್ಮೀಕಿ ನಿಗಮದಲ್ಲಿ ನೇರಾ ಸಾಲಕ್ಕೆ 43 ಅರ್ಜಿ, 2 ಲಕ್ಷ ಸಾಲಕ್ಕಾಗಿ 4, ಸ್ವಾವಲಂಬಿ ಸಾರಥಿ ಯೋಜನೆಯಡಿ 11 ಅರ್ಜಿ, ಗಂಗಾ ಕಲ್ಯಾಣದಡಿ 36 ಅರ್ಜಿ ಬಂದಿವೆ. ಆದರೆ, ಯಾವ ಅರ್ಜಿಯೂ ವಿಲೇ ಆಗಿಲ್ಲ, 2023-24ರಲ್ಲಿ 1.87 ಕೋಟಿ ರೂ. ಎಲ್ಲಿ ಹೋಗಿತು. ನಮ್ಮ ಸಮುದಾಯದ ಅಭಿವೃದ್ಧಿ ಹೇಗೇನಾ? ಸರ್ಕಾರದಲ್ಲಿ ಹಗಲ ದರೋಡೆಯಾಗುತ್ತಿದೆ ಎಂದು ಆರೋಪಿಸಿದರು.

ವಾಲ್ಮೀಕಿ ನಿಗಮದಲ್ಲಿ ಹಗರಣ ಆಗಿದೆ ಎಂದರೆ, ಇನ್ನುಳಿದ ನಿಗಮಗಳ ಕಥೆ ಏನು? ದದ್ದಲ್ ಅವರನ್ನು ಬಂಧಿಸಬೇಕು. ನೆಕ್ಕಂಟಿ ನಾಗರಾಜು ಪೋಸ್ಟರ್ ಪ್ರದರ್ಶಿಸಿದಿರಲ್ಲ, ಆ ವ್ಯಕ್ತಿ ಬಿಜೆಪಿಯಲ್ಲಿ ಇದ್ದರು. ಈಗ ಇಲ್ಲ ಎಂದು ಸ್ಪಷ್ಟಪಡಿಸಿದರು. ಮಧ್ಯಪ್ರವೇಶಿಸಿದ ಕಾಂಗ್ರೆಸ್ ಸದಸ್ಯರು, ನೆಕ್ಕಂಟಿ ನಾಗರಾಜ ಬಿಜೆಪಿ ಕಾರ್ಯಕರ್ತ ಎಂದು ಆರೋಪಿಸಿದರು. ಇದಕ್ಕೆ ಆಕ್ಷೇಪಿಸಿದ ಹೇಮಲತಾ ನಾಯಕ, ನೆಕ್ಕಂಟಿ ನಾಗರಾಜ ಇವತ್ತು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರ ಜತೆ ಟೀ ಕುಡಿಯುವ ಫೋಟೋ ಇದೆ. ಅವರ ಜತೆಯಲ್ಲೇ ಇರುತ್ತಾನೆ. ಅವನು ಫ್ರಾಡ್ ಇದ್ದಾನೆ ಎಂದರು. ಈ ವೇಳೆ ಆಡಳಿತ - ವಿಪಕ್ಷ ನಡುವೆ ಗದ್ದಲ ಉಂಟಾಯಿತು.

ವಾಲ್ಮೀಕಿ ದರೋಡೆಕೋರನಲ್ಲ

ವಾಲ್ಮೀಕಿ ದರೋಡೆ ಕೋರನಾಗಿದ್ದ ಎಂದು ಪರಿಷತ್ ಸದಸ್ಯ ಭೋಜೇಗೌಡ ಅವರ ಹೇಳಿಕೆ ಕಡತದಿಂದ ತೆಗೆದು ಹಾಕಬೇಕು. ಏಕೆಂದರೆ ಪಂಜಾಬ್ ನ ಹೈಕೋರ್ಟ್ 2009 ರಲ್ಲಿ ನ್ಯಾಯಾಧೀಶ ಅವರ ಪೀಠವು ವಾಲ್ಮೀಕಿ ಕಳ್ಳ, ದರೋಡೆ ಕೋರ ಆಗಿರಲಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಪಾಟಿಯಾಲದ ಪಂಜಾಬ್ ವಿವಿ ಮಹರ್ಷಿ ವಾಲ್ಮೀಕಿ ಪೀಠ ನಿರ್ದೇಶಕಿ ಡಾ.ಮಂಜುಳಾ ಸಕಾಷ್ಟು ಆಧಾರ ಒದಗಿಸಿದ್ದಾರೆ. ವೇದಗಳ ಕಾಲದಿಂದ ಹಿಡಿದು 9ನೇ ಶತಮಾನಗಳ ವರೆಗಿನ ದಾಖಲೆಯಲ್ಲಿ ಮಹರ್ಷಿ ವಾಲ್ಮೀಕಿ ದರೋಡೆಕೋರ ಆಗಿದ್ದ ಎಂಬ ಉಲ್ಲೇಖ ಎಲ್ಲೂ ವ್ಯಕ್ತವಾಗಿಲ್ಲ ಎಂದು ಸದನಕ್ಕೆ ತಿಳಿಸಿದರು.

ದರ್ಗಾ ಮೇಲೆ ಶ್ರೀರಾಮನ ಭಾವಚಿತ್ರ: ಯುವಕನ ಬಂಧನ

ರಾಣೇಬೆನ್ನೂರ: ಸಾಮಾಜಿಕ ಜಾಲತಾಣದಲ್ಲಿ ದರ್ಗಾ ಮೇಲೆ ಶ್ರೀರಾಮನ ಭಾವಚಿತ್ರ ಹಾಕಿ ಪ್ರಸಾರ ಮಾಡಿದ ಹಿನ್ನೆಲೆಯಲ್ಲಿ ರಾಣೇಬೆನ್ನೂರ ನಗರದಲ್ಲಿ ಬುಧವಾರ ತಡರಾತ್ರಿ ಗಲಾಟೆ ನಡೆದು ಯುವಕನೊಬ್ಬನನ್ನು ಬಂಧಿಸಿದ ಘಟನೆ ನಡೆದಿದೆ.

ರಾಣೇಬೆನ್ನೂರ ಜಮಾಲಶ್ಯಾವಲಿ ದರ್ಗಾದ ಮೇಲೆ ಶ್ರೀರಾಮ್ ಫೋಟೋ ಇಟ್ಟು ಅದನ್ನು ಸಾಮಾಜಿಕ ಜಾಲತಾಣದಲ್ಲಿ ಕಿಡಗೇಡಿಯೊಬ್ಬ ಹರಿಬಿಟ್ಟಿದ್ದು ಈ ಕುರಿತು ಮುಸ್ಲಿಂ ಸಮಾಜದವರು ದೂರು ಸಲ್ಲಿಸಿದ್ದಾರೆ. ಸಮಾಜದ ಶಾಂತಿಗೆ ಧಕ್ಕೆ ತಂದ ಹಿನ್ನೆಲೆಯಲ್ಲಿ ನಯನ ಕಿಟ್ಟದ ಎಂಬ ಇನ್‌ಸ್ಟಾಗ್ರಾಂನಲ್ಲಿ ಶೇರ್ ಮಾಡಿದ ಕಿಡಿಗೇಡಿಯನ್ನು ಪೊಲೀಸರು ಬಂಧಿಸಿದ್ದಾರೆ. ಈ ಹಿನ್ನೆಲೆ ಕೋಪಗೊಂಡ ಉಭಯ ಕೋಮಿನ ಸಮುದಾಯದ ಮುಖಂಡರ ಮಧ್ಯ ಮಾತಿನ ಚಕಮಕಿ ನಡೆದು ಗಲಾಟೆ ಹಿನ್ನೆಲೆಯಲ್ಲಿ ಕೊಂಚ ಕಾಲ ಉದ್ವಿಗ್ನತೆ ಕಂಡು ಬಂತು. ಹಾವೇರಿ ಎಸ್ಪಿ ಅಂಶುಕುಮಾರ್ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದ್ದಾರೆ.

ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ರಾಣೇಬೆನ್ನೂರ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಹೆಚ್ಚುವರಿ ಎಸ್ಪಿ ಸಿ.ಗೋಪಾಲ ಮಾಹಿತಿ ನೀಡಿದ್ದಾರೆ.

ನಕಲಿ ವೈದ್ಯರ ಮೇಲೆ ದಾಳಿ: ಪ್ರಕರಣ ದಾಖಲು

ರಬಕವಿ-ಬನಹಟ್ಟಿ: ವರಬಕವಿ-ಬನಹಟ್ಟಿ ತಾಲೂಕಿನ ಯಲ್ಲಟ್ಟಿ, ನಾವಲಗಿ, ಹನಗಂಡಿಯಲ್ಲಿ ನಕಲಿ ವೈದ್ಯರ ವಿರುದ್ಧ ಜಮಖಂಡಿ ತಾಲೂಕು ವೈದ್ಯಾಧಿಕಾರಿ ಡಾ.ಜಿ.ಎಸ್.ಗಲಗಲಿ ನೇತೃತ್ವದ ತಂಡ ದಾಳಿ ನಡೆಸಿ ಎರಡು ಆಸ್ಪತ್ರೆಗಳನ್ನು ಸೀಲು ಹಾಕಿ ಬಂದ್ ಮಾಡಿದ ಘಟನೆ ಗುರುವಾರ ನಡೆದಿದೆ. ತಾಲೂಕಿನ ನಾವಲಗಿ ಗ್ರಾಮದ ಪ್ರವೀಣ ಮಂಟೂರಮಠ, ಯಲ್ಲಟ್ಟಿ ಗ್ರಾಮದ ರಮೇಶ ಸಂತಿ ವಿರುದ್ಧ ಜಿಲ್ಲಾ ಸಕ್ಷಮ ಪ್ರಾಧಿಕಾರಕ್ಕೆ ದೂರು ಸಲ್ಲಿಸಲಾಗಿದೆ ಎಂದು ಡಾ.ಜಿ.ಎಸ್.ಗಲಗಲಿ ತಿಳಿಸಿದರು. ಅದೇ ರೀತಿಯಾಗಿ ಹನಗಂಡಿ ಗ್ರಾಮದ ಮುನ್ನೋಳ್ಳಿ ಅವರಿಗೆ ಎಚ್ಚರಿಕೆ ನೀಡಲಾಗಿದೆ. ಯಲ್ಲಟ್ಟಿಯ ಸಂತಿಯ ವರಿಗೆ ಈಗಾಗಲೇ ಎಚ್ಚರಿಕೆ ನೀಡಲಾಗಿತ್ತು. ಈ ಸಂದರ್ಭದಲ್ಲಿ ಆರೋಗ್ಯ ಅಧಿಕಾರಿಗಳಾದ ಉಮೇಶ ಜೋಶಿ, ರವಿಚಂದ್ರ ಪಾಟೀಲ, ಅಪ್ಪಾಜಿ ಹೂಗಾರ, ಪೊಲೀಸ್ ಇಲಾಖೆಯ ಎಂ. ಎಸ್. ಶೇಗುಣಸಿ ಇದ್ದರು.

ಪಂಢರಪುರಕ್ಕೆ ತೆರಳಿದ್ದ ಭಕ್ತನ ಸಾವು

ಬೆಳಗಾವಿ: ಆಷಾಢ ಏಕಾದಶಿ ನಿಮಿತ್ತ ಪಂಢರಪುರಕ್ಕೆ ತೆರಳಿದ್ದ ವಡಗಾವಿ ಸೋನಾರ್ ಗಲ್ಲಿಯ ಪ್ರವೀಣ ಬಲರಾಮ ಸುತಾರ (36) ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ವಾರಕರಿ ಮಂಡಳಿಯೊಂದಿಗೆ ಪಂಢರಪುರಕ್ಕೆ ತೆರಳಿದ್ದ ಪ್ರವೀಣ ಅವರಿಗೆ ಏಕಾಏಕಿ ಹೃದಯಾಘಾತವಾಗಿ ಅಲ್ಲಿಯೇ ಮೃತಪಟ್ಟಿದ್ದರು. ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದಿದರೂ ಪ್ರಯೋಜನವಾಗಲಿಲ್ಲ. ಮೃತರ ಅಂತ್ಯಕ್ರಿಯೆಯನ್ನು ಇಲ್ಲಿನ ವಡಗಾವಿಯಲ್ಲಿ ನೆರವೇರಿಸಲಾಯಿತು.

ಕಿರು ಸುದ್ದಿ

ಶಂಕಿತ ಡೆಂಘೀಗೆ ಯೋಧ ಬಲಿ

ಧಾರವಾಡ/ ಸವದತ್ತಿ: ಶಂಕಿತ ಡೆಂಘೀ ಜ್ವರಕ್ಕೆ ಸವದತ್ತಿ ಮೂಲದ ಬಿಎಸ್‌ಎಫ್ ಯೋಧ ಇಲ್ಲಿಯ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಸವದತ್ತಿ ಪಟ್ಟಣದ ಹನುಮಗಿರಿ ಓಣಿಯ ನಿವಾಸಿ ಮಂಜುನಾಥ ಕುಂದರಗಿ (33) ಮೃತ ಯೋಧ. ಓರಿಸ್ಸಾದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, 15 ದಿನದ ಹಿಂದೆ ಸವದತ್ತಿಗೆ ಆಗಮಿಸಿದ್ದರು ಎನ್ನಲಾಗಿದೆ.

ಕೆಲವೇ ದಿನಗಳಲ್ಲಿ ಜ್ವರ ಬಂದಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಗುಣವಾಗದ ಹಿನ್ನೆಲೆ ನಗರದ ಎಸ್‌ಡಿಎಂ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಸದೆ, ಮಂಜುನಾಥ ಅಸುನೀಗಿದ್ದಾರೆ. ಬಿಎಸ್‌ಎಫ್‌ನಲ್ಲಿ ಸತತವಾಗಿ 13 ವರ್ಷ ಸೇವೆ ಸಲ್ಲಿಸಿದ ಇವರಿಗೆ ಪತ್ನಿ ಹಾಗೂ ಪುತ್ರಿ ಪುತ್ರ ಸಹೋದರ ಇದ್ದು, ಸಹೋದರರೂ ಕೂಡಾ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಂತ್ಯಕ್ರಿಯೆಯಲ್ಲಿ ತಹಶೀಲ್ದಾರ್ ಮಲ್ಲಿಕಾರ್ಜುನ್ ಹೆಗ್ಗಣ್ಣವರ್, ಸವದತ್ತಿ ಪೊಲೀಸ್ ಠಾಣೆ ಪಿಎಸ್‌ಐ ಹಾಗೂ ಸಿಬ್ಬಂದಿ ಮತ್ತು ಮಾಜಿ ಸೈನಿಕರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಸ್ಥಳೀಯ ಗಣ್ಯರು ಅವರ ಸಂಬಂಧಿಕರು ಉಪಸ್ಥಿತರಿದ್ದರು. ಸರ್ಕಾರಿ ಗೌರವದೊಂದಿಗೆ ಕುಮಾರೇಶ್ವರ ರುದ್ರಭೂಮಿಯಲ್ಲಿ ಅಂತಿಮ ಸಂಸ್ಕಾರ ನಡೆಯಿತು.

ಹೃದಯಾಘಾತದಿಂದ ಸಾವು

ಚಿಕ್ಕೋಡಿ: ಆಷಾಢ ಏಕಾದಶಿ ನಿಮಿತ್ತ ಸುಕ್ಷೇತ್ರ ಪಂಢರಪುರದಲ್ಲಿ ವಿಠ್ಠಲನ ದರ್ಶನ ಪಡೆದು ಸ್ವಗ್ರಾಮ ಬೋರಗಾಂವ ಪಟ್ಟಣಕ್ಕೆ ಹಿಂದಿರುಗುವಾಗ ಭಕ್ತನೊಬ್ಬ ಹೃದಯಾಘಾತದಿಂದ ಮೃತಪಟ್ಟ ಘಟನೆ ಜು.18ರಂದು ನಡೆದಿದೆ.

ನಿಪ್ಪಾಣಿ ತಾಲೂಕಿನ ಬೋರಗಾಂವ ಪಟ್ಟಣದ ನಿವಾಸಿ ಲಹು ರಾಮಾ ಬೇವಿನಕಟ್ಟಿ (62) ಮೃತಪಟ್ಟ ವೃದ್ಧ. ಜು.17ರಂದು ವಿಠ್ಠಲ ರುಕ್ಮಿಣಿ ದರ್ಶನ ಪಡೆದುಕೊಂಡು ಲಹು ಬೇವಿನಕಟ್ಟಿ ಗುರುವಾರ ಸ್ವಗ್ರಾಮ ಬೋರಗಾಂವ ಪಟ್ಟಣಕ್ಕೆ ಹಿಂದಿರುಗಲು ಸಿದ್ಧತೆ ಮಾಡ